

# ಅಂಗಳದ ಅಂದಗಾತಿ
# ಹಸಿರಸಿರಿ ನೂಲೆಗೆಣಸು

- ಡಾ. ಸತ್ಯ

ಕಡಿಮೆ ಖರ್ಚಿನಿಂದ ಹೆಚ್ಚು ಆದಾಯ ಪಡೆವ ಹಿರಿಯ ತಲೆಮಾರಿನ ಮಂದಿ ಬಲು ಲೆಕ್ಕಾಚಾರದವರಾಗಿದ್ದರು. ಯಾವ ಯಾವ ಋತುವಿನಲ್ಲಿ ಯಾವ ಯಾವ ತರಕಾರಿ ಮನೆಮಂದಿಗೆ ಆರೋಗ್ಯ ತರುವುದು ಎಂದು ಅವರಿಗೆ ತಿಳಿದ ಸಂಗತಿ. ಎಂದೂ ಹಿಂದಿನ ತಲೆಮಾರಿನ ಮಂದಿ ತರಕಾರಿ ಕೊಂಡು ತಿನ್ನರು. ತಾವೂ ತಿಂದು ಇತರರಿಗೆ ಹಂಚುತ್ತಿದ್ದ ಸುಭಿಕ್ಷದ ಕಾಲವದಾಗಿತ್ತು. ಅಂತಹ ಹಳೆ ತಲೆಮಾರಿಗಷ್ಟೆ ಪರಿಚಿತವಾಗಿದ್ದ ಅಪರೂಪದ ಗೆಡ್ಡೆ ತರಕಾರಿ ನೂಲೆ ಅಥವಾ ತುಪ್ಪೆಗೆಣಸು ಇಂದು ಜನ ಕಂಡರಿಯದ ಹಸಿರ ಸಿರಿ. ಮನೆಯಂಗಳದ ಅಂದ ಚಂದದ ಹಬ್ಬು ಬಳ್ಳಿಯಾಗಿ ಬೆಳೆಯಬಲ್ಲ ಅಪರೂಪದ ಸಸ್ಯ ಸಂಪತ್ತು. ದೇಹದ ರೋಗ ನಿರೋಧಕತೆ ಹೆಚ್ಚಿಸಬಲ್ಲ ಜೀವ ಸಂಜೀವಿನಿ ಸಹ. ಇಂದು ಜನ ಈ ಬಳ್ಳಿ ಕಾಣಲು ಲಾಲ್ ಬಾಗಿನ ಪ್ರದರ್ಶನಕ್ಕೆ ಹೋಗಬೇಕಾದ ಅನಿವಾರ್ಯತೆ ಇದೆ. ಇಂತಹ ಅಪರೂಪದ ಹಸುರು ಹೊನ್ನಿನ ಮರುಬಳಕೆ ಮತ್ತು ಚಲಾವಣೆ ನಮ್ಮ ಹೊಣೆಗಾರಿಕೆ ಸಹ ಹೌದು.

ಗ್ರೀಕ್ ತತ್ವಜ್ಞಾನಿಯೊಬ್ಬನ ಹೆಸರು ಹೊತ್ತ ಈ ಬಳ್ಳಿ ಕ್ರಿಸ್ತಪೂರ್ವ ಯುಗದಿಂದಲೇ ಜನ ಮನಕ್ಕೆ ಹತ್ತಿರವಿದ್ದಿರಬೇಕು. ಡಯೊಸ್ಕೊರೊಯಿಡ್ಸ್ ಎಂಬಾತ ಅಂದಿನ ತತ್ವ ಜ್ಞಾನಿ. ಈ ಬಳ್ಳಿಯ ಮೂಲ ಹೆಸರು ಡಯೊಸ್ಕೊರಿಯಾ. ಇದರ ನಾಲ್ಕು ಪ್ರಭೇದ ನಮ್ಮ ಕಾಡು ಮತ್ತು ನಾಡಿನ ಬಳ್ಳಿಯಾಗಿ ಸಸ್ಯವಿಜ್ಞಾನಿಗಳಿಂದ ಗುರುತಿಸಿಕೊಳ್ಳುವುದು. ಡ. ಎಲಾಟ, ಡ. ಬಲ್ಬಿಫೆರಾ, ಡ. ಒಪೊಸಿಟಿಫೊಲಿಯ ಮತ್ತು ಡ. ಪೆಂಟಾಫಿಲ್ಲ. ಚಿತ್ರದಲ್ಲಿ ನೀವು ನೋಡುವ ಪ್ರಭೇದವು ಡ. ಎಲಾಟ. ಥೇಟ್ ವೀಳ್ಯದೆಲೆ ಆಕಾರದ ಎಲೆಯಂಚಿನ ಪುಟ್ಟ ಪುಟ್ಟ ಗೆಡ್ಡೆಯಿಂದ ಹೊಸ ಸಸಿ ಹುಟ್ಟುವುದು. ಅಲ್ಲದೆ ನೆಲದಡಿಯ ಗೆಡ್ಡೆಯ ಗಿಣ್ಣು ಸಹ ಹೊಸ ಸಸಿ ಮೊಳೆಯಿಸಲು ಸಮರ್ಥ. ಅವನ್ನು ಮರಳು ಮಿಶ್ರಿತ ತೇವ ನೆಲದಡಿ ನಾಕಾರು ದಿನ ಹುದುಗಿಸಿಡಿ. ತಟ್ಟನೆ ಹೊಸ ಚಿಗುರೊಡೆದು ನೋಡ ನೋಡುತ್ತಿದ್ದಂತೆ ಬಳ್ಳಿ ಸೂರಿನತ್ತ ಧಾವಿಸೀತು. ಉತ್ತಮ ಆಸರೆಗೆ ಊರೆಗೋಲು ನೀಡಿದರೆ ಸುಂದರ ಲತಾಮಂಟಪವಾಗಿ, ಅಂಗಳದ ಹಸಿರು ಚಪ್ಪರವಾಗಿ ಈ ಗೆಣಸಿನ ಬಳ್ಳಿ

ನೋಡುಗರ ಹೃದಯ, ಮನ ಗೆಲ್ಲುವುದು ನಿಜ ಸಂಗತಿ. ಅಷ್ಟು ಮಾತ್ರವಲ್ಲ ನೆಲದಡಿಯ ಗೆಡ್ಡೆಯ ಕರಾಮತ್ತು ಬಲ್ಲಿರಾ? ಕಡುಬೇಸಿಗೆಯ ಸುಡು ಬಿಸಿಲಿನ ಬಸವಳಿದ ಮೈಗೆ ಮತ್ತು ಹೃದಯಕ್ಕೆ ನಿತ್ಯ ಬಲದಾಯಕ ಪೌಷ್ಟಿಕ ಟಾನಿಕ್ ತರಕಾರಿ! ಪಲ್ಯ, ಸಾಂಬಾರು, ಮಜ್ಜಿಗೆ ಹುಳಿ, ಗೊಜ್ಜು ತಯಾರಿಕೆಗೆ, ಒಳ್ಳೆಯ ಅಡಿಗೆಗೆ ಒದಗುವ ಮತ್ತು ಎಲ್ಲ ವಯೋಮಾನದವರಿಗೆ ವರದಾನವಾಗಬಲ್ಲ ಮತ್ತು ನಿತ್ಯ ಉಪಯೋಗಕ್ಕೆ ಅರ್ಹವಾದ ಅಪರೂಪದ ಸುವಸ್ತು ಇದು.



ಡಯೊಸ್ಕೊರಿಯವನ್ನು ನಿಮ್ಮ ಮನೆಯಂಗಳದ ಡಾಕ್ಟರ್ ಎಂದೇ ಭಾವಿಸಲಡ್ಡಿಯಿಲ್ಲ. ದೇಹದ ಎಲ್ಲ ಜೀವರಸಾಯನಿಕ ಕ್ರಿಯೆ ಸರಿದೂಗಿಸಬಲ್ಲ ಹಾರ್ಮೋನುಗಳ ಬಗ್ಗೆ ನೀವು ಕೇಳಿರಬಹುದು. ಅಂತಹ ಅಪರೂಪದ ನಿಸರ್ಗದತ್ತ ಹಾರ್ಮೋನು ಮೂಲ ಈ ಬಳ್ಳಿ. ಹಾಗಾಗಿ ಏನೂ ಅಡ್ಡ ಪರಿಣಾಮ ಇಲ್ಲದೆ ಈ ತರಕಾರಿ ಬಳಸಿ. ಹಾರ್ಮೋನು ಕೊರತೆಯಿಂದ ಉಂಟಾಗುವ ಇಂದಿನ ನಾನಾ ರೋಗ ರುಜಿನಗಳಿಂದ ನೀವು ಖಂಡಿತ ಪಾರಾಗುವಿರಿ. ಆಲೂಗೆಡ್ಡೆ ನಮ್ಮ ದೇಶಕ್ಕೆ ಕಾಲಿರಿಸಿ ಕೇವಲ ಒಂದು ಶತಮಾನ ಕಳೆದಿರಲಿಕ್ಕಿಲ್ಲ. ಅಂದಿನ ತನಕ ಈ ಬಳ್ಳಿಯನ್ನೇ ಆಲುಕ ಎಂದು ಕರೆದ ನಮ್ಮ ಹಿರಿಯರು ಇದರ ರೋಗನಿರೋಧಕ ಹಾಗೂ ಮುಪ್ಪು ಮುಂದೂಡುವ, ಸದಾ ನವ ಚೈತನ್ಯ ಕಾಪಾಡುವ ಗುಣಧರ್ಮ ಅರಿತಿದ್ದರು. ಎಲೆ ಅರೆದು ಚೇಳು, ಕೀಟದ ಕಡಿತದ ಮದ್ದಾಗಿ ಲೇಪಿಸುವ ಪ್ರಯೋಗವಿತ್ತು. ಗೆಡ್ಡೆ ಅರೆದು ಲೇಪಿಸಿ ಗಾಯ ಒಣಗಿಸಿಕೊಳ್ಳುತ್ತಿದ್ದರು. ಉಪ್ಪಿನ ಮಣ್ಣು ಶೋಧಿಸಲು ಹಿಂದೆ ಎಲೆಬಳಕೆ ಇತ್ತು.ಮೂಲವ್ಯಾಧಿ,ರಕ್ತಭೇದಿ, ಆಮಶಂಕೆ , ಚರ್ಮರೋಗ, ಮೂತ್ರಕೋಶದ ಕಲ್ಲು, ಹೃದ್ರೋಗ, ಬಹುಮೂತ್ರದಂತಹ ಕಾಯಿಲೆ ಅಡಗಿಸುವ ಮಾಂತ್ರಿಕ ಶಕ್ತಿ ಈ ಬಳ್ಳಿಗಿದೆ ಎಂದರೆ ಹುಬ್ಬೇರಿಸದಿರಿ. ಆಲೂ ಗೆಡ್ಡೆಯಂತಹದರ ನಿತ್ಯ ಬಳಕೆಯಿಂದ ಅಪಾಯವಿದೆ.ಆಲೂ ಗೆಡ್ಡೆಯ ಪ್ಯುರೈನ್ ಎಂಬ ರಾಸಾಯನಿಕ ಬೇಗ ಅರಗದ ವಸ್ತು. ಕೀಲು ಸಂದಿನಲ್ಲಿ ಸೇರಿ ರೋಗ ಕಾರಿ. ಆದರೆ ಈ ಆಲುಕಕಂದ ಅಂದರೆ ಗೆಡ್ಡೆ ನಿತ್ಯಬಳಕೆಗೆ ಅರ್ಹ. ಅಷ್ಟುಮಾತ್ರವಲ್ಲ. ನಿಮ್ಮ ದೇಹ ನವತಾರುಣ್ಯ ಚಿಮ್ಮಿಸಲು ಸಹಾಯಕ. ಇಂದಿಗೂ ಗಿರಿಜನರು ಈ ಗೆಡ್ಡೆಯನ್ನು ಕಾಡಿನಿಂದ ಅಗೆದು ತಂದು ತಿಂದು ತಮ್ಮರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳುವ ದೃಷ್ಟಾಂತ ಹುಣಸೂರಿನ ಹಾಡಿಗಳಲ್ಲಿ ಸ್ವತಹ ಕಂಡಿದ್ದೇನೆ.ಇಂತಹ ನಮ್ಮ ಹಿತ್ತಲ ಹೊನ್ನು ಇಂದು ಬಹುರಾಷ್ಟ್ರೀಯ ಕಂಪೆನಿಗಳ ಪಾಲಾಗುವ ಭಯವಿದೆ. ಇದರ ಮರು ಪರಿಚಯ ಮತ್ತು ಮರುಬಳಕೆ ಇಂದು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಅತ್ಯಗತ್ಯ.ಅಷ್ಟು ಮಾತ್ರವಲ್ಲ. ಎಲ್ಲ ನರ್ಸರಿಗಳಲ್ಲಿ ಇಂತಹ ಅಪರೂಪದ ಸಸ್ಯಸಿರಿಗಳ ಗಿಡ ಉತ್ಪಾದನೆಗೆ ಆದ್ಯತೆ ದೊರಕಬೇಕು.ಕೃಷಿಗೆ ಒತ್ತು ದೊರಕಬೇಕು. ಮಾಧ್ಯಮಗಳು ಸಹ ಈ ಸಸ್ಯ ಸಂಜೀವಿನಿಗಳ ಉಳಿವಿಗೆ ಮತ್ತು ಅರಿವಿಗೆ ಮನ್ನಣೆ ದೊರಕಿಸಬೇಕಾದ್ದು ಅನಿವಾರ್ಯ ಮತ್ತು ಇಂದಿನ ದಿನಗಳಿಗೆ ತುಂಬ ಪ್ರಸ್ತುತ.

***